**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

**ಸಾಕ್ಷಿಗೆ ದಿನಾಂಕಃ 18-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 778/2018

CW-10 PW-10

| | | |
|---|---|---|
| ಸಾಕ್ಷಿದಾರರ ಹೆಸರು | - | ರಾಯಗೊಂಡ ಸಿದ್ದಪ್ಪಾ ಜಾನರ |
| ವಯಸ್ಸು | - | 48 ವರ್ಷ |
| ಉದ್ಯೋಗ | - | ಪಿ ಆಯ |
| ಸಾಕೀನ | - | ವಿಜಯಪೂರ |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ (ವಿ ಸಿ ಮುಖಾಂತರ)**

1) ನಾನು ದಿಃ 02-12-2016 ರಿಂದ 20-02-2018 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 28-12-2017 ರಂದು ಚಾಸಾ 9 ರವರಿಂದ ಪ್ರರಕಣದ ಕಡತವನ್ನು ಪಡೆದು ತನಿಖೆ ಮುಂದುವರೆಸಿ ಅದೇ ದಿನ ವಾಹನ ಪರೀಕ್ಷಾ ವರದಿಯನು ಪಡೆದು ಕಡತಕ್ಕೆ ಅಳವಡಿಸಿಕೊಂಡು ದಿಃ 30-01-2018 ರಂದು ಗಾಯದ ಪ್ರಮಾಣ ಪತ್ರವನ್ನು ಚಾಸಾ 8 ರವರಿಂದ ಪಡೆದು ಕಡತಕ್ಕೆ ಅಳವಡಿಸಿ ಅದೇ ದಿನ ಆರೋಪಿಯ ವಿರುದ್ಧ ತನಿಖೆ ಪೂರ್ಣಗೊಳಿಸಿ ದೋಷಾರೋಪಣ ಪಟ್ಟಿಯನ್ನುಸಲ್ಲಿಸಿರುತ್ತೇನೆ.

3) ಸಾಕ್ಷಿ ನಿಪಿ-4 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು, ಸಾಕ್ಷಿ IMV ವರದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು, ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ (ವಿ ಸಿ ಮುಖಾಂತರ)**

1) ನಾನು ತನಿಖೆಯ ಸಂಪೂರ್ಣ ಕಡತವನ್ನು ಪರಿಶೀಲನೆ ಮಾಡಿ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ. ನಿಪಿ–5 ನ್ನು ಸ್ವೀಕರಿಸುವ ಮೊದಲೆ ದೂರು ದಾಖಲಾಗಿರುತ್ತದೆ ಎಂದರೆ ಸರಿ. ನಿಪಿ–9 ರಲ್ಲಿ ಬಸವೇಶ್ವರ ಸರ್ಕಲನ ಪಶ್ಚಿಮ ದಿಕ್ಕಿಗೆ ಜೆ ಎಸ್ ಎಸ್ ಕಾಲೇಜ ತೋರಿಸಲಾಗಿದೆ ಎಂದರೆ ಸರಿ. ಅಪಘಾತವು ಸದರಿ ಕಾಲೇಜಿನ ಮುಂದೆ ಆಗಿರುತ್ತದೆ ಎಂದು ಬರೆದಿರುತ್ತೇನೆ ಎಂದರೆ ಸರಿ. ನಿಪಿ–9 ರಲ್ಲಿ ಘಟನಾ ಸ್ಥಳವು ಎಮ ಎಚ್ ಎಸ್ ಸ್ಕೂಲ ಹತ್ತಿರ ಪಶ್ಚಿಮ ದಿಕ್ಕಿಗೆ ತೋರಿಸಲಾಗಿದೆ ಎಂದರೆ ಸರಿ. ದೂರಿನಲ್ಲಿ ಹೇಳಿದ ಘಟನಾ ಸ್ಥಳ ಮತ್ತು ನಿಪಿ–9 ರಲ್ಲಿ ತೋರಿಸಿರುವ ಘಟನಾ ಸ್ಥಳ ಬೇರೆ ಬೇರೆಯಾಗಿರುತ್ತವೆ ಎಂದರೆ ಸರಿಯಲ್ಲ. ನಿಪಿ–11 ಪ್ರಕರಣಕ್ಕೆ ಸಂಬಂಧಿಸಿದಿ ದಾಖಲೆಯಾಗಿರುವುದಿಲ್ಲ, ಪ್ರಕರಣಕ್ಕೆ ಅನುಕೂಲವಾಗುವಂತೆ ನಿಪಿ–11 ನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಅಪಘಾತವಾಗಿರುವುದಿಲ್ಲ , ಚಾಸಾ 1 ರವರಿಗೆ ಪರಿಹಾರ ಪಡೆಯಲು ಸಹಾಯ ಮಾಡುವ ಉದ್ದೇಶದಿಂದ ಆರೋಪಿಯ ತಪ್ಪಿಲ್ಲದಿದ್ದರೂ , ಠಾಣೆಯಲ್ಲಿಯೇ ಕುಳಿತು ದಾಖಲೆಗಳನ್ನು ಪ್ರರಕಣಕ್ಕೆ ಅನುಕೂಲವಾಗುವಂತೆ ತಯಾರಿಸಿ ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.